‘ಯಾರದು?’ ಎಂದು ಪ್ರಶ್ನಿಸಿತು. ‘ನಾನು ಇರುವೆ, ಒಂದು ಮಗುವಿನ ತಾಯಿ’ ಎಂದಿತು. ಹಾವು ಕೂಡ ಇರುವೆಯನ್ನು ತಿರಸ್ಕಾರದಿಂದ ನೋಡಿ, ‘ಏನಾಗಬೇಕಿತ್ತು, ಇಲ್ಲಿಗೆ ಯಾಕೆ ಬಂದೆ?’ ಎಂದು ಪ್ರಶ್ನಿಸಿತು. ಆಗ ಇರುವೆ, ‘ನದಿಯ ದಡದಲ್ಲಿ ಒಂದು ಕಪ್ಪೆ ಕುಳಿತಿದೆ, ಅದಕ್ಕೆ ತುಂಬಾ ಸೊಕ್ಕು ಬಂದಿದೆ, ಬಾ ಅದನ್ನು ಹಿಡಿದು ನುಂಗು’ ಎಂದು ಹಾವನ್ನು ಆಹ್ವಾನಿಸಿತು. ‘ಇಲ್ಲಿ ಬೇಕಾದಷ್ಟು ಕಪ್ಪೆಗಳಿವೆ, ಬೇಕಾದಾಗ ನಾನು ತಿನ್ನುತ್ತೇನೆ, ನೀನಿಲ್ಲಿಂದ ಹೊರಡು’ ಎಂದು ರೇಗಿದ ಹಾವು ಹುತ್ತದ ಕೋವಿನೊಳಗೆ ಮರೆಯಾಯಿತು.

‘ನನ್ನಂಥ ಗೆದ್ದಲು ಹುಳುಗಳು ಕಟ್ಟಿದ ಹುತ್ತದಲ್ಲಿ ನೀನು ವಾಸ ಮಾಡುತ್ತಿದ್ದೀಯ, ಆದರೂ ನನ್ನಂಥವರಿಗೆ ಸಹಾಯ ಮಾಡುತ್ತಿಲ್ಲ, ಇರು ನಿನಗೆ ಮಾಡುತ್ತೇನೆ’ ಎಂದು ಬಯ್ಯುತ್ತ ಇರುವೆ ಮುಂದೆ ಸಾಗಿತು. ಮುಂದೆ ದಾರಿಯಲ್ಲಿ ಒಬ್ಬ ಹಾವಾಡಿಗ ಬರುತ್ತಿದ್ದ. ಅವನು ನೆಲವನ್ನೇ ನೋಡದೆ ನಡೆಯುತ್ತಿದ್ದ. ಅವನನ್ನು ಹೇಗೆ ಮಾತಾಡಿಸುವುದು? ಹೇಗೆ ಅವನ ಗಮನ ನನ್ನ ಕಡೆ ತಿರುಗಿಸುವುದು? ಇರುವೆ ಅವನ ಕಾಲಿನ ಬೆರಳನ್ನು ಕಚ್ಚಿತು. ಅವನು ಕಾಲನ್ನು ಜಾಡಿಸುತ್ತಾ ಕೆಳಕ್ಕೆ ನೋಡಿದ. ಒಂದು ಇರುವೆ ದೈನ್ಯದಿಂದ ಕಾಲ ಬುಡದಲ್ಲಿ ಕುಳಿತಿತ್ತು. ಹಾವಾಡಿಗ ಅದನ್ನು ಹೊಸಕಿ ಹಾಕಲು ಕೈ ಹಾಕಿದ. ಅಷ್ಟರಲ್ಲಿ ಅದು, ‘ಮನುಷ್ಯಣ್ಣ ಮನುಷ್ಯಣ್ಣ ನನ್ನನ್ನು ಕೊಲ್ಲಬೇಡ. ನನಗೊಂದು ಸಹಾಯ ಮಾಡು’ ಎಂದು ಬೇಡಿ ಕೊಂಡಿತು. ‘ನಿನಗೆ ನಾನೇನು ಸಹಾಯ ಮಾಡಬೇಕು?’ ಎಂದು ಕೇಳಿದ. ಆಗ ಇರುವೆ, ‘ಅಲ್ಲಿ ಕಾಣುವ ಹುತ್ತದಲ್ಲಿ ಹಾವೊಂದು ಇದೆ. ಅದಕ್ಕೆ ಬಹಳ ಅಹಂಕಾರ. ಅದನ್ನು ಹಿಡಿದು, ಅದರ ವಿಷದ ಹಲ್ಲುಗಳನ್ನು ಕಿತ್ತು ನಿನ್ನ ಬುಟ್ಟಿಯಲ್ಲಿ ಇಟ್ಟುಕೋ’ ಎಂದು ಕೇಳಿಕೊಂಡಿತು. ಅದಕ್ಕೆ ಹಾವಾಡಿಗ, ‘ನನ್ನಲ್ಲಿ ಈಗಾಗಲೇ ಬೇಕಾದಷ್ಟು ಹಾವುಗಳಿವೆ, ನೀನು ಹೇಳಿದೆ ಎಂದು ಹಾವು ಹಿಡಿಯಲು ಸಾಧ್ಯವಿಲ್ಲ. ಇಲ್ಲಿಂದ ಹೊರಡು’ ಎಂದು ಇರುವೆಯನ್ನು ತಿರಸ್ಕಾರದಿಂದ ನೋಡಿ ಹೊರಟು ಹೋದ.

ಇರುವೆಗೆ ನಿರಾಸೆಯಾದರೂ ಹೇಗಾದರೂ ಮಾಡಿ ತನ್ನ ಮಗುವನ್ನು ಬದುಕಿಸಿಕೊಳ್ಳಬೇಕು ಎಂದು ಯೋಚಿಸುತ್ತಾ ಮುಂದೆ ಹೋಯಿತು. ಮುಂದೆ ಹೋಗುತ್ತಿದ್ದಂತೆ ಅಲ್ಲೊಂದು ಇಲಿಯ ಬಿಲ ಕಾಣಿಸಿತು. ಈ ಇಲಿಯಿಂದಾದರೂ ಏನಾದರೂ ಸಹಾಯವಾಗಬಹುದು ಎಂದು ಯೋಚಿಸಿ, ‘ಇಲಿಯಣ್ಣ ಇಲಿಯಣ್ಣಾ’ ಎಂದು ಕೂಗಿತು. ಬಿಲದ ಒಳಗಡೆ ಕುಂತು ಹಾಯಾಗಿ ನಿದ್ರೆ ಮಾಡುತ್ತಿದ್ದ ಇಲಿ ಮೈಮುರಿಯುತ್ತಾ ಬೇಸರದಿಂದಲೇ ಈಚೆ ಬಂದಿತು. ‘ಯಾರು ನೀನು? ಏನಾಗಬೇಕು?’ ಎಂದು ಕೇಳಿತು. ನಡೆದ ಘಟನೆಗಳನ್ನೆಲ್ಲಾ ಹೇಳಿದ ಇರುವೆ, ‘ಆ ಹಾವಾಡಿಗನ ಹಾವಿನ ಬುಟ್ಟಿಯನ್ನು ನಿನ್ನ ಹಲ್ಲಿನಿಂದ ಕತ್ತರಿಸಿ ಅವನ ಹಾವುಗಳನ್ನು ಆಚೆ ಬಿಡು’ ಎಂದು ಕೇಳಿಕೊಂಡಿತು. ಅದಕ್ಕೆ ಇಲಿ, ‘ಅವನ ಬುಟ್ಟಿಯನ್ನು ಕತ್ತರಿಸಿ ನನಗೇನಾಗಬೇಕು? ನಾನೇಕೆ ಆ ಕೆಲಸ ಮಾಡಲಿ? ನಡೆ ಇಲ್ಲಿಂದ ಆಚೆ’ ಎಂದು ರೇಗಿ ತನ್ನ ಬಿಲ ಸೇರಿಕೊಂಡಿತು. ಇರುವೆಗೆ ಸಿಟ್ಟು ಬಂತು. ‘ನನ್ನಂಥ ಚಿಕ್ಕಪುಟ್ಟ ಪ್ರಾಣಿಗಳನ್ನು ತಿಂದು ಬದುಕುವ ನೀನು ಈಗ ಒಂದು ಸಹಾಯವನ್ನು ಮಾಡಲಾರೆಯಾ?’ ಎಂದು ಬೈಯುತ್ತಾ, ‘ಇರಲಿ ನಿನಗೆ ಮಾಡುತ್ತೇನೆ’ ಎಂದು ಮುಂದೆ ಹೋಯಿತು.

ಆಗ ಇರುವೆಗೆ ಒಂದು ಬೆಕ್ಕು ಕಾಣಿಸಿತು. ಅಲ್ಲೊಂದು ಮೋಟುಗೋಡೆಯ ಮೇಲೆ ಅರೆಗಣ್ಣು ಮುಚ್ಚಿಕೊಂಡು ಬೆಕ್ಕು ನಿದ್ದೆ ಮಾಡುತ್ತಿತ್ತು. ಬೆಕ್ಕನ್ನು ನೋಡಿದ ಇರುವೆ, ‘ಬೆಕ್ಕಣ್ಣಾ ಬೆಕ್ಕಣ್ಣಾ’ ಎಂದು ಕೂಗಿತು. ನಿಧಾನಕ್ಕೆ ಕಣ್ತೆರದ ಬೆಕ್ಕು ಇರುವೆಯನ್ನು ಕಂಡು, ಸೋಮಾರಿತನದಿಂದ ಆಕಳಿಸುತ್ತಾ, ‘ಏನು?’ ಎಂದಿತು. ‘ಅಲ್ಲೊಂದು ಬಿಲದಲ್ಲಿ ಇಲಿ ಇದೆ, ಅದಕ್ಕೆ ತುಂಬ ಸೊಕ್ಕು ಬಂದಿದೆ. ಅದನ್ನು ಹಿಡಿದು ತಿಂದುಬಿಡು’ ಎಂದು ಕೇಳಿಕೊಂಡಿತು. ಅದಕ್ಕೆ ಬೆಕ್ಕು, ‘ನಾನು ಈಗ ತಾನೇ ಊಟ ಮಾಡಿ ಮಲಗಿದ್ದೇನೆ. ನನ್ನ ನಿದ್ದೆ ಹಾಳು ಮಾಡಬೇಡ, ನಡಿ ಇಲ್ಲಿಂದ’ ಎಂದು ರೇಗಿ ಹಾಗೇ ಕಣ್ಣು